ಶ್ರೀಮಧ್ವರಾಜಗುರುಭ್ಯೋನಮಃ

ಶ್ರೀ ಮಧ್ವರಾಯರ ಕರುಣ  ಪಡೆಯದವ

ರಾಗ- ಕಾಂಬೋಧಿ ( ಭೂಪ)                ಅಟ್ಟತಾಳ( ದೀಪಚಂದಿ)

ಮಧ್ವರಾಯರ ಕರುಣ ಪಡೆಯದವ।
ಧರೆಯೊಳಗೆ ಇದ್ದರೇನು ಇಲ್ಲದಿದ್ದರೇನು    ॥ಪ॥
ಮಧ್ವಮತವೇ ಮತವು ಸಕಲಶ್ರುತಿ ಸಮ್ಮತವು।
ಮಧ್ವರಾಯರ ಧ್ಯಾನ ಅಮೃತಪಾನ ॥
ಮಧ್ವರಾಯರ ಲೀಲೆ ನವರತುನದಾ ಮಾಲೆ।
ಮಧ್ವೇಶನಾ ಸ್ಮರಣೆ ಕುಲಕೋಟಿ ಉದ್ಧರಣೆ        ॥ 1 ॥
ಮಧ್ವರಾಯರ ಕಥೆಯ ಕೇಳಲದು ದುರಿತಹರ।
ಮಧ್ವರಾಯರ ಭಕುತಿ ಮಾಡೆ ಮುಕುತಿ ॥
ಮಧ್ವರಾಯರ ಸ್ತೋತ್ರ ಮಾಡಿದವ ಸತ್ಪಾತ್ರ।
ಮಧ್ವರಾಯರ ಭಜನೆ ದುಷ್ಕರ್ಮ ತ್ಯಜನೆ  ॥ 2 ॥
ಮಧ್ವರಾಯರ ದಾಸನಾದವನೆ ನಿರ್ದೋಷ।
ಮಧ್ವರಾಯರ ಬಂಟ ಜಗಕೆ ನೆಂಟ ॥
ಮಧ್ವರಮಣಾ ನಮ್ಮ ವಿಜಯವಿಠ್ಠಲನಾದ।
ಮಧ್ವೇಶನಾ ಕರುಣಾ ಪಡೆದವನೆ ಶರಣ   ॥ 3 ॥

॥ ಶ್ರೀಮಧ್ವಾತಂರ್ಗತ ಶ್ರೀಕೃಷ್ಣಾರ್ಪಣಮಸ್ತು॥